# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ-8603/2015/ಪಿ.ಪಿ ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 02/06/2020.

## ಮಾನ್ಯ ಘನತೆವೆತ್ತ ರಾಜ್ಯಪಾಲರ ಸನ್ನಿಧಿಗೆ ವಿಶೇಷ ವರದಿ
## ಕಲಂ 12(5) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರಡಿಯಲ್ಲಿ.

ವಿಷಯ: ಶ್ರೀ. ಈರಭಸಪ್ಪ ಶಿದ್ದಪ್ಪ ಅಂಗಡಿ ಇವರು ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯಾ ಕ್ರಮ ಜರುಗಿಸುವ ಕುರಿತು.

ಉಲ್ಲೇಖ: ಕಲಂ 12(1) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರಡಿ ಸಲ್ಲಿಸಿದ ವರದಿ ದಿನಾಂಕ: 08/09/2016.

* * * * * *

ಶ್ರೀ. ಈರಬಸಪ್ಪ ಶಿರ್ವಪ್ಪ ಅಂಗಡಿ ಸಾ॥ ಹಲಗತ್ತಿ, ತಾಲ್ಲೂಕು ರಾಮದುರ್ಗ, ಜಿಲ್ಲೆ ಬೆಳಗಾವಿ ಇವರು (ಇನ್ನು ಮುಂದೆ ದೂರುದಾರರು ಎಂದು ಕರೆಯಲಾಗುತ್ತದೆ). ಇವರು ಶ್ರೀಮತಿ ಶಾಂತವ್ವ ಎಮ್. ಕುಂಬಾರ, ಕಾರ್ಯದರ್ಶಿ, ಗ್ರಾಮ ಪಂಚಾಯಿತಿ, ಹಲಗತ್ತಿ, ತಾಲ್ಲೂಕು ರಾಮದುರ್ಗ, ಜಿಲ್ಲೆ ಬೆಳಗಾವಿ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಾರ್ವಜನಿಕ ಕರ್ತವ್ಯ ಲೋಪ, ದುರ್ನಡತೆ ವಿರುದ್ಧ ಈ ದೂರನ್ನು ಸಲ್ಲಿಸಿದ್ದು ಕಲಂ (9) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರಡಿ ತನಿಖೆಗಾಗಿ ತೆಗೆದುಕೊಳ್ಳಲಾಗಿದೆ.

2. ದೂರುದಾರರು ಗ್ರಾಮ ಪಂಚಾಯಿತಿಯ ಉಪಯೋಗಕ್ಕಾಗಿ ನೀಡಿದ ಜಮೀನನ್ನು ಪತ್ರ ನೊಂದಣಿ ಕಾಲಕ್ಕೆ ಜಾಗದ ಅಳತೆಯನ್ನು ತಪ್ಪಾಗಿ ತೋರಿಸಿ ದಾಖಲೆಗಳನ್ನು ತಿದ್ದುಪಡಿ ಮಾಡಿಕೊಂಡು ಅನಧಿಕೃತವಾಗಿ ಹೆಚ್ಚುವರಿ ಜಾಗೆಯನ್ನಿ ಉಪಯೋಗಿಸಿಕೊಂಡು ತರಾತುರಿಯಿಂದ ಕೆಲಸ ನಿರ್ವಹಿಸಿದ್ದು ಮತ್ತು ಈ ಸಮಯದಲ್ಲಿ ಸರ್ಕಾರಿ ಜಾಗದಲ್ಲಿದ್ದ

ವಿಠ್ಠಲ ಮಂದಿರದ ಹಾಗೂ ಅಂಗನವಾಡಿ ಜಾಗವನ್ನು ಕೆಡವಿ ಹಾಕಿದ್ದು, ಕಾರಣ ಸಾರ್ವಜನಿಕ ಹಿತದೃಷ್ಟಿಯಿಂದ ಒತ್ತುವರಿಯಾದ ವಿಠ್ಠಲ ಮಂದಿರದ ಮತ್ತು ಅಂಗನವಾಡಿ ಜಾಗವನ್ನು ಪುನಃ ಪಡೆದುಕೊಳ್ಳಬೇಕು ಎಂದು ಕೋರಿ ಈ ದೂರನ್ನು ಸಲ್ಲಿಸಿರುತ್ತಾರೆ.

3. ಮೇಲ್ನೋಟಕ್ಕೆ ಈ ದೂರು ತನಿಖೆಗೆ ಯೋಗ್ಯವಾಗಿರುವುದರಿಂದ ಹಾಗೂ ಎದುರುದಾರರ ವಿರುದ್ಧ ಸಾಕಷ್ಟು ಆಧಾರಗಳು ಕಂಡುಬಂದಿದ್ದರಿಂದ ಈ ಬಗ್ಗೆ ವಿವರವಾದ ತನಿಖೆ ನಡೆಸಿದಾಗ, ದಾಖಲೆಗಳಲ್ಲಿ 110 ಅಡಿ X 150 ಅಡಿ ಎಂದು ತಪ್ಪಾಗಿ ನಮೂದಿಸಿ, ಪಂಚಾಯತಿಗೆ ಸೇರಿದ ಆಸ್ತಿಯನ್ನು ಮೇಲಾಧಿಕಾರಿಗಳ ಅನುಮತಿ ಪಡೆಯದೆ ವರ್ಗಾಯಿಸಿರುವುದು ಕಂಡಬಂದಿದ್ದರಿಂದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಉತ್ತರ-ದಕ್ಷಿಣದಲ್ಲಿ ಹೆಚ್ಚುವರಿ ಮಾಡಿದ 70 ಅಡಿ ಜಾಗವನ್ನು ಮರಳಿ ಪಡೆಯಲು, ಈ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲುವಂತೆ ಕೋರಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(1) ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಶಿಫಾರಸ್ಸು ಮಾಡಿ ವರದಿ ಸಲ್ಲಿಸಲಾಗಿರುತ್ತದೆ.

4. ತನಿಖಾ ಸಂಗತಿಗಳು ಈ ಪ್ರಕರಣದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಹೆಚ್ಚುವರಿ ಜಾಗವನ್ನು ಮರಳಿ ಪಡೆಯುವ ಬಗ್ಗೆ ದೃಢೀಕರಿಸಿರುತ್ತವೆ, ಸಕ್ಷಮ ಪ್ರಾಧಿಕಾರವಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಈ ಬಗ್ಗೆ ಯಾವುದೇ ರೀತಿಯ ಸೂಕ್ತ ಕ್ರಮ ತೆಗೆದುಕೊಂಡಿರುವುದಿಲ್ಲ.

5. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(1) ರಡಿ ಶಿಫಾರಸ್ಸು ವರದಿಯನ್ನು ಜಾರಿಗೊಳಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 12(2) ಅಡಿ ಅನುಪಾಲನೆ ಮಾಡಿ ವರದಿಯನ್ನು ಸಲ್ಲಿಸುವಂತೆ ಸಕ್ಷಮ ಪ್ರಾಧಿಕಾರವಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ದಿನಾಂಕ: 23/02/2019, 26/04/2019, 08/07/2019, 30/08/2019, 07/12/2019 ಮತ್ತು 03/01/2020 ರಂದು ಪತ್ರ

ಬರೆಯಲಾಗಿದ್ದರೂ ಈ ಕುರಿತು ಸರ್ಕಾರವು ಯಾವುದೇ ರೀತಿಯ ಅಗತ್ಯ ಕ್ರಮ ಜರುಗಿಸಿರುವುದಿಲ್ಲ.

6. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(5) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ವಿಶೇಷ ವರದಿಯನ್ನು ಕಲಂ 12(5) ಅಡಿ ಘನತೆವೆತ್ತ ರಾಜ್ಯಪಾಲರ ಸನ್ನಿಧಿಗೆ ಸಲ್ಲಿಸುತ್ತಿದ್ದೇನೆ.

N. Anand 2/6

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ.**